2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**2/2012**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕಿರಣ್ ಕುಮಾರ್ | ಪಿಡಬ್ಲ್ಯೂ - 41 |
| ತಂದೆಯ ಹೆಸರು | - | ಡಿ. ಯಶವಂತ್ | ಸಿಡಬ್ಲ್ಯೂ - 20 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಪಿ.ಸಿ.1448, ಪೇಪರ್ ಟೌನ್ ಪೊಲೀಸ್ ಠಾಣೆ, ಭದ್ರಾವತಿ | |
| ವಾಸ ಸ್ಥಳ | - | ಭದ್ರಾವತಿ, ಶಿವಮೊಗ್ಗ ಜಿಲ್ಲೆ | |

ದಿನಾಂಕಃ 16-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು 2009 ರಿಂದ 2013 ರವರೆಗೆ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಸಿ.ಯಾಗಿ ಸೇವೆ ಸಲ್ಲಿಸಿದ್ದೇನೆ.
2. ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು ಮೊಕದ್ದಮೆ ಸಂಖ್ಯೆ 210/2011 ಕ್ಕೆ ಸಂಬಂಧಿಸಿದಂತೆ ದಿಃ 21.08.2011 ರಂದು ಸದರಿ ಮೊಕದ್ದಮೆಯ 2 ನೇ ಶಿವು @ ಶಿವಕುಮಾರ್ ಬಿನ್ ಕೃಷ್ಣಮೂರ್ತಿ ಇವನ ಪತ್ತೆಗಾಗಿ ನನ್ನನ್ನು ಪಿ.ಸಿ ಸಂತೋಷ್ ಕುಮಾರ್ ಮತ್ತು ಪಿ.ಸಿ ಚೇತನ್ ಕುಮಾರ್ ಇವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿರುತ್ತಾರೆ. ಅದರಂತೆ ಆ ದಿನ ಬೆಳಿಗ್ಗೆ ಠಾಣೆಯಿಂದ ಹೊರಟು ಕುಗ್ವೇ, ಸಿರಿವಂತೆ, ಹಾಲಳ್ಳಿ, ತಾಳಗುಪ್ಪ ಕಡೆಗಳಲ್ಲಿ ಸಂಚರಿಸಿ ಅಲ್ಲಿ ಬಾತ್ಮಿದಾರರು, ಜೋಗ ಕಡೆ ಹೋಗುವ

ಬಸ್ ನ ಚಾಲಕರನ್ನು ಮತ್ತು ನಿರ್ವಾಹಕರನ್ನು ಭೇಟಿ ಮಾಡಿ ಅವರಿಗೆ ವಿಷಯ ತಿಳಿಸಿ, 2 ನೇ ಆರೋಪಿಯ ಶಿವುನ ಚಹರೆಗಳನ್ನು ತಿಳಿಸಿ ವಿಚಾರ ಮಾಡಿದ್ದು ಆದರೆ ಯಾವುದೇ ಮಾಹಿತಿ ಗೊತ್ತಾಗಿರುವುದಿಲ್ಲ. ನಂತರ ಅಲ್ಲಿಂದ ಗುಡ್ಡೆಮನೆ ಚೂರಿಕಟ್ಟೆಕಡೆ ಹೋಗಿದ್ದು ಅಲ್ಲಿ ಹೊನ್ನಾವರ ರಸ್ತೆಯಲ್ಲಿ ಇರುವ ಒಂದು ಕಿರಾಣಿ ಅಂಗಡಿಯ ಹತ್ತಿರ ಒಬ್ಬ ವ್ಯಕ್ತಿ ನಿಂತಿದ್ದು ಅವನ ಚಹರೆಯು 2 ನೇ ಆರೋಪಿಯ ಶಿವುನ ಚಹರೆಗೆ ಹೋಲಿಕೆಯಾಗಿದ್ದು ನಮ್ಮನ್ನು ನೋಡಿ ಆತನು ಓಡಿ ಹೋಗಲು ಪ್ರಯತ್ನಿಸಿದ್ದು ನಾವು 3 ಜನ ಹೋಗಿ ಆತನನ್ನು ಹಿಡಿದುಕೊಂಡು, ಆತನ ಹೆಸರು, ವಿಳಾಸ ಕೇಳಲಾಗಿ, ಆತನು ತನ್ನ ಹೆಸರು ಶಿವು @ ಶಿವಕುಮಾರ್ ಬಿನ್ ಕೃಷ್ಣಮೂರ್ತಿ, ವಾಸ ಚೂರಿಕಟ್ಟೆ ತಮಿಳು ಜನಾಂಗ ಎಂದು ಹೇಳಿರುತ್ತಾನೆ. ಸದರಿ ಮೊಕದ್ದಮೆಯಲ್ಲಿ ಇರುವ 2 ನೇ ಆರೋಪಿ ಶಿವು ಆತನೇ ಎಂದು ನಮಗೆ ಖಾತರಿಯಾದ ನಂತರ ಆತನನ್ನು ಸಂಜೆ 5.00 ಗಂಟೆಗೆ ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರ ಮುಂದ ಸಂಜೆ 5.45 ಗಂಟೆಗೆ ಆತನನ್ನು ವರದಿಯೊಂದಿಗೆ ಹಾಜರು ಪಡಿಸಿರುತ್ತೇವೆ.

3. ನಾನು ಆ ದಿನ ಸದರಿ ಮೊಕದ್ದಮೆಯ 2 ನೇ ಆರೋಪಿಯನ್ನು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ಬಗ್ಗೆ ವರದಿ ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.71 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.71(ಎ) ಎಂದು ಗುರುತಿಸಲಾಯಿತು.

4. ನಾವು ಆ ದಿನ ಚೂರಿಕಟ್ಟೆ ಹತ್ತಿರ ಹೊನ್ನಾವರ ರಸ್ತೆಯಲ್ಲಿ ಇರುವ ಒಂದು ಕಿರಾಣಿ ಅಂಗಡಿಯ ಹತ್ತಿರ ಇರುವ ವ್ಯಕ್ತಿಯನ್ನು ನೋಡಿದ್ದು

ಆತನನ್ನು ನಾವು ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ್ದು ಆತನನ್ನು ನೋಡಿದರೆ ಗುರುತಿಸುತ್ತೇನೆ. (ಸದರಿ 2 ನೇ ಆರೋಪಿಯ ವಿರುದ್ದ ಪ್ರಕರಣವನ್ನು ಪ್ರತ್ಯೇಕ ಮಾಡಲಾಗಿದ್ದು ಸದರಿ ಪ್ರಕರಣ ಸಂಖ್ಯೆ 78/2017 ಎಂದು ಪ್ರಕರಣ ನಡೆಯುತ್ತಿರುತ್ತದೆ.)

<u>ಪಾಟೀ ಸವಾಲು ಶ್ರೀ ಪಿ.ಇ.ಎಸ್. ವಕೀಲರಿಂದ – ಆರೋಪಿತನ ಪರವಾಗಿ</u>

5. ನಾನು ಮೇಲೆ ಹೇಳಿದ ಮೊಕದ್ದಮೆಗೆ ಸಂಬಂಧಿಸಿದ 2 ನೇ ಆರೋಪಿ ಶಿವುನನ್ನು ವಶಕ್ಕೆ ಪಡೆದುಕೊಂಡಿದ್ದು ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿ ಶಿವು ನಮ್ಮ ಪೊಲೀಸ್ ಠಾಣೆಯಲ್ಲಿ ನಿಃ 20.08.2011 ಕ್ಕಿಂತ 3 ದಿನಗಳ ಮುಂಚೆ ವಶದಲ್ಲಿ ಇದ್ದ ಎಂದರೆ ಸರಿಯಲ್ಲ. ನಿ.ಪಿ.71 ಬರವಣಿಗೆಯನ್ನು ನಮ್ಮ ಇನ್ಸ್ ಪೆಕ್ಟರ್ ಕಚೇರಿಯ ರೈಟರ್ ಬರೆದಿರುತ್ತಾರೆ. ನಿ.ಪಿ.70 ಮತ್ತು 71 ರಲ್ಲಿ ಇರುವ ಬರವಣಿಗೆಯು ಒಬ್ಬರದೇ ಎಂದರೆ ನನಗೆ ಗೊತ್ತಾಗುತ್ತಿಲ್ಲ. 2 ನೇ ಆರೋಪಿಯನ್ನು ನಾವು ವೃತ್ತ ನಿರೀಕ್ಷಕರ ಕಚೇರಿಗೆ ಸಂಜೆ 5.45 ಗಂಟೆಗೆ ಕರೆತಂದ ಸಮಯದಲ್ಲಿ ವರದಿಯನ್ನು ಬರೆಸಿರುತ್ತೇವೆ. ನಿ.ಪಿ.71 ರಲ್ಲಿ ಬರವಣಿಗೆ ಮಾಡಲು ನಾನು ಉಕ್ತಲೇಖನ ನೀಡಿರುತ್ತೇನೆ. ಆ ಸಮಯದಲ್ಲಿ ಫ್ರಾಸಾ.40 ಪ್ರಕಾಶ್ ರವರು ಎಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕಾಶ್ ರವರು ಠಾಣೆಯ ರೈಟರ್ ಇರುತ್ತಾರೆ.
6. ನಾನು ನಿ.ಪಿ.71 ರಂತೆ ವರದಿಯನ್ನು ನೀಡಿದ್ದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾ